# ಬಸವರಾಜ ಕಟ್ಟೀಮನಿ ಅವರ ಕಾದಂಬರಿಯಲ್ಲಿ ಸಾಮಾಜಿಕತೆ

ಭಾರತಿ ಎಸ್. ಗದ್ದಿ

ಸಹಪ್ರಾಧ್ಯಾಪಕರು, ಕೆ.ಎಲ್.ಇ ಸಂಸ್ಥೆಯ ಎಸ್.ಎಸ್.ಎಮ್.ಎಸ್.
ಮಹಾವಿದ್ಯಾಲಯ, ಅಥಣಿ.

DOI: https://doi.org/10.5281/zenodo.17221543

## ABSTRACT:

ಕನ್ನಡ ಸಾಹಿತ್ಯದ ಪುನರಾವಲೋಕನ ನಡೆಯುತ್ತಿರುವ ಇಂದಿನ ದಿನಗಳಲ್ಲಿ ಸಾಹಿತ್ಯ ಅಧ್ಯಯನ ಕೈಗೊಳ್ಳುವುದು ಅರ್ಥಪೂರ್ಣವಾಗಿದೆ. ಸಾಹಿತ್ಯದ ಮಹತ್ವ ಹಾಗೂ ಲೇಖಕರ ಅಥವಾ ಕೃತಿಗಳು ಪಡೆದುಕೊಂಡ ಹೊಸ ಆಯಾಮಗಳನ್ನು ಅವಲೋಕನ ಮಾಡುವುದೇ ಅಧ್ಯಯನದ ಉದ್ದೇಶ. ಈ ದಿಸೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳ ಪರಿಚಯ ಮಾಡಿಕೊಳ್ಳುವುದು ಅವಶ್ಯಕ. ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಕಾದಂಬರಿ, ಸಮರ್ಥವಾಗಿ ಬೆಳೆದು ಬಂದ ಸಾಹಿತ್ಯ ಪ್ರಕಾರವಾಗಿದೆ. ಪ್ರಗತಿಶೀಲ ಸಾಹಿತ್ಯದಲ್ಲಿ ತಮ್ಮದೇ ಆದ ರೀತಿಯಲ್ಲಿ ಅರ್ಥಪೂರ್ಣತೆಯನ್ನು ತಂದುಕೊಟ್ಟವರಲ್ಲಿ ಕಟ್ಟೀಮನಿಯವರು ಒಬ್ಬರು. ಅವರ ಸಾಮಾಜಿಕ ಕಾದಂಬರಿಗಳು ಬೆಳೆದು ಬಂದ ಬಗ್ಗೆಯನ್ನು ವಿವೇಚಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ.

## KEYWORDS:

ಪ್ರಗತಿಶೀಲ ಸಾಹಿತ್ಯ, ಕಾದಂಬರಿ, ಸಾಮಾಜಿಕತೆ, ಕಾರ್ಮಿಕರು, ಶೋಷಣೆ.

ಕಟ್ಟೀಮನಿಯವರ ಸಾಹಿತ್ಯ ಸಾಧನೆಗೆ ಬಹುಮುಖ್ಯ ಪ್ರೇರಣೆಯಾದ ಸಂಗತಿ ಎಂದರೆ ಅವರ ಹಳ್ಳಿಯ ಜೀವನ, ಬಡತನದ ಬಾಳು, ತಾಯಿಯ ಮಮತೆ, ಬಾಲ್ಯದಿಂದಲೇ ಓದುವ ಹವ್ಯಾಸ, ದೇಶ ವಿದೇಶದ ಸಾಹಿತಿಗಳ ಪ್ರಭಾವ, ಅನ್ಯಾಯ ಶೋಷಣೆಗಳೆದುರು ಸಿಡಿದು ನಿಲ್ಲುವ ಮನೋಧರ್ಮ, ದೀನ ದಲಿತರ, ರೈತ ಕಾರ್ಮಿಕರ ಬಗ್ಗೆ ಅನುಕಂಪ, ಸ್ವಾತಂತ್ರ್ಯ ಚಳುವಳಿಯಲ್ಲಿ ಜೈಲುವಾಸ, ಸಮಾಜವಾದದ ಒಲವುಇವೆಲ್ಲವೂ ಕಟ್ಟೀಮನಿಯವರ ವ್ಯಕ್ತಿತ್ವ ರೂಪಗೊಳ್ಳಲು ಕಾರಣವಾಗಿವೆ.

ಕಟ್ಟೀಮನಿಯವರು ಒಟ್ಟು ನಲವತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಅವುಗಳನ್ನು ಅಭ್ಯಾಸದ ಅನುಕೂಲಕ್ಕಾಗಿ, ಕಾದಂಬರಿ ಒಳಗೊಂಡಿರುವ ವಸ್ತು ಅಥವಾ ಕಥೆಯ ಹಿನ್ನಲೆಯಾಗಿಟ್ಟುಕೊಂಡು ಹೀಗೆ ವಿಂಗಡಿಸಬಹುದು: ರಾಷ್ಟ್ರೀಯತೆಗೆ ಹಾಗೂ ಕಾರ್ಮಿಕ ಹೋರಾಟಕ್ಕೆ ಸಂಬಂಧಿಸಿದ ಕಾದಂಬರಿಗಳು, ಸಾಮಾಜಿಕ ಕಾದಂಬರಿಗಳು, ರಾಜಕೀಯ ಕಾದಂಬರಿಗಳು ಹಾಗೂ ಐತಿಹಾಸಿಕ ಕಾದಂಬರಿಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ. ಬಹಳಷ್ಟು ಕಾದಂಬರಿಗಳು ಸಾಮಾಜಿಕವಾಗಿದ್ದು

ವಿವಿಧ ಬಗೆಯ ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ.

ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಸಾಕಾರಗೊಳಿಸಿದ ಕಾದಂಬರಿಯಾದ "ಮಾಡಿ ಮಡಿದವರು" ಈ ಕಾದಂಬರಿಯ ಕಥೆಯಲ್ಲಿ ಬರುವ ಚಳುವಳಿಯ ರೋಮಾಂಚನಕಾರಿ, ನಿಷ್ಠುರ ಪಾತ್ರಗಳು, ಕುತೂಹಲಕಾರಿ ಘಟನೆಗಳು, ಹಳ್ಳಿಯ ಮುದುಕಮುದುಕಿಯರಲ್ಲೂ ಮಿಂಚಿದ ಸ್ವಾತಂತ್ರ್ಯದ ಕೆಚ್ಚು, ಜಾತಿಮತಗಳನ್ನೆಣಿಸದ ರಾಷ್ಟ್ರೀಯ ಭಾವೈಕ್ಯತೆ ಇವೆಲ್ಲವನ್ನು ಅತ್ಯಂತ ಸಂಯಮದಿಂದ ಮತ್ತು ಅನುಭವ ಪೂರ್ಣವಾದ ಒಂದು ಅತ್ಯುತ್ತಮ ಕಾದಂಬರಿಯಾಗಿದೆ. 'ಮಾಡಿ ಮಡಿದವರು' ಮತ್ತು 'ಜರತಾರಿ ಜಗದ್ಗುರು' ಕಾದಂಬರಿಗಳಂತೂ ಅಪಾರ ಸಂಖ್ಯೆಯ ಓದುಗರಿಂದ ಜನಪ್ರಿಯತೆಯನ್ನು ಪಡೆದಿವೆ. ಕಟ್ಟೀಮನಿಯವರನ್ನು ನಾಡಿಗೆಲ್ಲ ಪರಿಚಯಿಸಿದ ಕಾದಂಬರಿಗಳಾಗಿವೆ.

ಕಾರ್ಮಿಕ ಹೋರಾಟದ ಚಿತ್ರಣವುಳ್ಳ ಮಹತ್ವದ ಪ್ರಗತಿಶೀಲ ಕಾದಂಬರಿಯಾದ 'ಜ್ವಾಲಾಮುಖಿ' ಇದರಲ್ಲಿ ಕಂಡು ಬರುವ ಸನ್ನಿವೇಶ, ಸ್ವತಂತ್ರ ಭಾರತದ ಮುಕ್ತ ವಾತಾವರಣದಲ್ಲಿ ಭ್ರಷ್ಟತೆಯ ಮೂಲಕವೇ ಬಂಡವಾಳಶಾಹಿಗಳು, ಕಾರ್ಮಿಕರ ಮೇಲೆ ನಡೆಸಿದ ಶೋಷಣೆಗೆ ಕಾರ್ಮಿಕರು ತೋರಿದ ಪ್ರತಿಭಟನೆಯನ್ನು ವಾಸ್ತವಿಕ ನೆಲೆಯಲ್ಲಿ ಕಟ್ಟಿಕೊಡುವ ಹೋರಾಟದ ಕಥೆಯಾಗಿದೆ.

ಕಟ್ಟೀಮನಿಯವರ ಸಾಮಾಜಿಕ ಕಾದಂಬರಿಗಳ ವಿಶೇಷತೆಯೇ ಈ ಪ್ರಬಂಧದ ಉದ್ದೇಶವಾಗಿದೆ. ಕಟ್ಟೀಮನಿಯವರ ಸಾಮಾಜಿಕ ಕಾದಂಬರಿಗಳಲ್ಲಿ ಮೂಡಿ ಬಂದ ಚಿತ್ರಣವನ್ನು ಪ್ರಧಾನವಾಗಿಟ್ಟುಕೊಂಡು ನೋಡಿದಾಗ ಅವರಲ್ಲಿದ್ದ ಸಾಮಾಜಿಕ ಕಾಳಜಿ ಎದ್ದು ಕಾಣುತ್ತದೆ. ಸಮಾಜದಲ್ಲಿ ಕಂಡು ಬರುವ ಸಾಮಾಜಿಕ ಸಮಸ್ಯೆಗಳನ್ನು, ವ್ಯಕ್ತಿಶಕ್ತಿಗಳನ್ನು, ವಿಕೃತಿಗಳನ್ನು, ಅವರು ಎತ್ತಿ ತೋರಿಸಿದ್ದಾರೆ. ಕಟ್ಟೀಮನಿಯವರ ಒಟ್ಟು ಕಾದಂಬರಿಗಳಲ್ಲಿ ಮುಕ್ಕಾಲು ಭಾಗ ಸಾಮಾಜಿಕ ಕಾದಂಬರಿಗಳೇ ಆಗಿವೆ. ಸಮಾಜದ ವಿವಿಧ ಅಂಗ, ರಂಗಗಳ ಸಮಸ್ಯೆಗಳ ಮೇಲೆ ವಿಶಿಷ್ಟವಾದ ಕಾಳಜಿ ನೋಡುತ್ತೇವೆ. ಸಾಮಾಜಿಕ ಸಮಾನತೆಯನ್ನು ಧ್ಯೇಯವಾಗಿಟ್ಟುಕೊಂಡ ಅಸಮಾನತೆಗೆ ಮತ್ತು ಸಾಮಾಜಿಕ ವಿಕೃತಿಗೆ ಕಾರಣವಾಗುವ ಸಮಸ್ಯೆಯನ್ನು ವಸ್ತುನಿಷ್ಠವಾಗಿ, ಕಟುವಾಗಿ ತಮ್ಮ ಕಾದಂಬರಿಗಳ ಮೂಲಕ ಹೇಳಿಕೊಂಡಿದ್ದಾರೆ.

ಕಟ್ಟೀಮನಿಯವರ ಸಾಮಾಜಿಕ ಕಳಕಳಿಯಿಂದ ತಮ್ಮ ಅನುಭವಕ್ಕೆ ಬಂದುದನ್ನು, ಸತ್ಯ ಘಟನಾವಳಿಗಳನ್ನು ನೇರವಾಗಿ, ಯಾವ ಕಟ್ಟುಪಾಡುಗಳನ್ನು ಲೆಕ್ಕಿಸದೆ ನೈಜಚಿತ್ರಣ, ಸಾಮಾಜಿಕ ಪ್ರಜ್ಞೆ, ಸಮಾಜದ ಹಲವಾರು ಮುಖಗಳನ್ನು ಅವರ ಕಾದಂಬರಿಗಳಲ್ಲಿ ಎದ್ದು ಕಾಣುತ್ತೇವೆ.

ಸಾಮಾಜಿಕ ಕಾದಂಬರಿಗಳಾದ 'ಮೋಹದ ಬಲೆಯಲ್ಲಿ' ಹಾಗೂ 'ಜರತಾರಿ

ಜಗದ್ಗುರು', ಸಾಕ್ಷಾತ್ಕಾರ, ಆಶ್ರಮವಾಸಿ ಕಾದಂಬರಿಗಳನ್ನು ರಚಿಸಿದ್ದಾರೆ. 'ಮೋಹದ ಬಲೆಯಲ್ಲಿ' ಕಾದಂಬರಿಯು ದೀರ್ಘವಾಗಿದ್ದು ತೀರ ವರ್ಣನಾತ್ಮಕವಾಗಿದೆ. ಕುತೂಹಲಕಾರಿಯಾಗಿದೆ. ಕಥನ ಕ್ರಮದಿಂದ ಹಿಡಿದು ಪಾತ್ರಚಿತ್ರಣದವರೆಗೂ ಹಾಗೂ ಕಲಾತ್ಮಕತೆಯಿಂದ ಯಾವ ಅಡೆತಡೆಯಿಲ್ಲದೆ ಓದಿಸಿಕೊಂಡು ಹೋಗುತ್ತದೆ. ಮತ್ತು ಕೇಂದ್ರ ವಸ್ತುವಿನ ಬಗ್ಗೆ ವಿಚಾರಕ್ಕೆ ಹಚ್ಚುತ್ತದೆ. ಇಲ್ಲಿ ಬರುವ ಸನ್ನಿವೇಶಗಳಾದ ಬಾಲ್ಯವಿವಾಹ, ವಿಧವೆಯರ ಸಮಸ್ಯೆ, ಜನತೆಯ ಅಜ್ಞಾನ, ಅಂಧಶ್ರದ್ಧೆ ಮೊದಲಾದ ಸಾಮಾಜಿಕ ಸಮಸ್ಯೆಗಳ ಮೇಲೆ ಹಾಗೂ ನಮ್ಮ ಸಮಾಜದಲ್ಲಿ ಉಂಟು ಮಾಡಿರುವ ಪರಿಣಾಮಗಳ ಮೇಲೆ ಬೆಳಕು ಬೀರುತ್ತದೆ. ಜಾತಿ–ಉಪಜಾತಿಗಳಲ್ಲಿರುವವರು ಪರಸ್ಪರ ಕಿತ್ತಾಡಿ, ಜಗಳ ಕಾಯುವುದು, ಅರ್ಥವಿಲ್ಲದ ಪ್ರತಿಷ್ಠೆಯಿಂದ ಮರೆಯುವುದು, ಊರನ್ನು ಬಣಬಣಗಳನ್ನಾಗಿ ಒಡೆಯುವುದು, ಒಟ್ಟಾರೆ ಒಂದು ಸಾಮಾಜಿಕ ವಿಘಟನೆ ಉಂಟಾಗುವುದು, ಇದನ್ನೆಲ್ಲ ಕಟ್ಟೀಮನಿಯವರು ತುಂಬಾ ನೈಜವಾಗಿ ಚಿತ್ರಿಸಿದ್ದಾರೆ.

'ಮೋಹದ ಬಲೆಯಲ್ಲಿ' ಕಾದಂಬರಿಯಲ್ಲಿ ಕಪಟ ಸ್ವಾಮಿಯೊಬ್ಬ ತನ್ನ ಕುಟಿಲತೆಯಿಂದ ಮುಗ್ಧ, ಅಮಾಯಕ ಮಹಿಳೆಯರನ್ನು ಮರುಳು ಮಾಡಿ ಕಾಮದಾಟಕ್ಕೆ ಬಳಸಿಕೊಳ್ಳುತ್ತ ಸುಂದರ ಸಂಸಾರಗಳನ್ನು ಒಡೆಯುತ್ತ ಸಾಗುತ್ತಾನೆ. ತಮಗೊಂದು ಉನ್ನತ ಸ್ಥಾನ ಕಲ್ಪಿಸಿ, ಮನಃಪೂರ್ವಕ ಸೇವೆ ಮಾಡಿ, ಸಂಪತ್ತಾದಿಗಳನ್ನಿತ್ತು ಗೌರವಿಸುವ ಈ ಸಮಾಜಕ್ಕೆ ಸ್ವಾಮಿಗಳು ನಿರ್ಲಜ್ಜತೆಯಿಂದ, ನಿಷ್ಕರುಣೆಯಿಂದ ಎರಡು ಬಗೆಯುತ್ತಾರೆ. ಇಂಥವರು ಸಮಾಜಕ್ಕಂಟಿದ ಒಂದು ಶಾಪ, ಗುಣಪಡಿಸಲಾಗದ ರೋಗವಿದ್ದಂತೆ. ಇಂಥ ಸ್ವಾಮಿಗಳು ಮತ್ತು ಅಂಥವರ ಮಠಗಳು ನಮಗೆ ಬೇಕೆ? ಎಂಬ ಸವಾಲಿನ ಮುಖಾಂತರ ಚಿಂತನೆಗೆ ಹಚ್ಚುವ, ಸಾಮಾಜಿಕ ಜಾಗೃತಿ ಮೂಡಿಸುವ ಕ್ರಾಂತಿಕಾರಿ ಕಾದಂಬರಿ ಇದು.

ಕಥಾ ಪ್ರಧಾನ 'ಮೋಹದ ಬಲೆಯಲ್ಲಿ' ತನ್ನ ಸುಲಲಿತ ಶೈಲಿಯೊಂದಿಗೆ ಕುತೂಹಲ ಕೆರಳಿಸುತ್ತ ಓದುಗನನ್ನು ಕಟ್ಟಿ ಹಾಕುತ್ತದೆ. ರಸಮಯ ಸನ್ನಿವೇಶಗಳು ಹಾಗೂ ಸಿದ್ಧವೀರ ನೀಡುವ ರಂಜನೆ ಆಕರ್ಷಣೀಯವಾಗಿದೆ. ಆದರೆ ಎಲ್ಲಿಯೂ ಅಶ್ಲೀಲತೆಗೆ ಇಳಿದಿಲ್ಲ. ಇಂಥದರ ನಡುವೆಯೂ ಪ್ರಭುಸ್ವಾಮಿಯಂತಹ ಪಾತ್ರದ ಮೂಲಕ ಗ್ರಾಮದಲ್ಲಿ ಸುಧಾರಣೆ, ಜನಜಾಗೃತಿ ಉಂಟು ಮಾಡಿಸಲು ಪ್ರಯತ್ನಿಸುತ್ತಾರೆ. ಹೀಗಾಗಿ ಈ ಪಾತ್ರ ಕೂಡ ಗಮನ ಸೆಳೆಯುತ್ತದೆ. ಕಾದಂಬರಿಕಾರರಿಗೆ ಸಿದ್ಧವೀರಸ್ವಾಮಿಯ ಅನೈತಿಕ, ಅಧಃಪತನದ ಬದುಕನ್ನು ಚಿತ್ರಿಸಲು ಈ ಕಾದಂಬರಿಯ ಪಾತಳಿ ಸಾಲಲಿಲ್ಲವೆನಿಸುತ್ತದೆ. ಹೀಗಾಗಿ ಇದೇ ಕಥೆಯನ್ನು ಅವರು ಇನ್ನೊಂದು ಕಾದಂಬರಿ 'ಜರತಾರಿ ಜಗದ್ಗುರು' ದಲ್ಲಿ ಮುಂದುವರಿಸುತ್ತಾರೆ.

'ಜರತಾರಿ ಜಗದ್ಗುರು' ಹೆಣ್ಣು, ಹೊನ್ನು, ಮಣ್ಣುಗಳೆಂಬ ಪ್ರಲೋಭನೆಗಳಿಗೆ

ಹೊರತಾಗಿ ಬಾಳುವುದು ಸುಲಭವಲ್ಲ. ಬ್ರಹ್ಮಚರ್ಯ ಪಾಲಿಸುತ್ತ ಶುದ್ಧ, ಸರಳ, ಸಾತ್ವಿಕ ಜೀವನ ನಡೆಸುತ್ತ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಬೇಕಾದ ಎಷ್ಟೋ ಮಠಾಧೀಶರು ಕಾಮನೆಗಳಿಂದ, ಲಂಪಟತನದಿಂದ ಮುಕ್ತರಾಗಲು ಸಾಧ್ಯವಾಗುತ್ತಿಲ್ಲ. ಕಾವಿ ತೊಟ್ಟರೂ, ಸನ್ಯಾಸ ದೀಕ್ಷೆ ಪಡೆದರೂ ಮನಸ್ಸು ನಿಯಂತ್ರಿಸಲಾಗದೆ ಕಪಟ ಜೀವನ ನಡೆಸುತ್ತ ಆತ್ಮವಂಚನೆಯೊಂದಿಗೆ ಸಮಾಜಕ್ಕೆ ದ್ರೋಹ ಬಗೆಯುತ್ತ ಸಾಗುತ್ತಿರುವುದು ಒಂದು ನಗ್ನಸತ್ಯ. 'ಮೋಹದ ಬಲೆಯಲ್ಲಿ' ಮತ್ತು ಈ 'ಜರತಾರಿ ಜಗದ್ಗುರು' ಕಾದಂಬರಿಯಲ್ಲಿ ಲಂಪಟನಾಗಿ ವಿಜೃಂಭಿಸುವ ಸಿದ್ಧವೀರಸ್ವಾಮಿ ಇಂಥವರೆಲ್ಲರ ಪ್ರತಿನಿಧಿ. ಐಷಾರಾಮಿ ಜೀವನ, ಮೋಜು, ಸ್ತ್ರೀಲೋಲುಪತೆಗಾಗಿ ಸಿದ್ಧವೀರಸ್ವಾಮಿ ಜರತಾರಿ ಜಗದ್ಗುರು ಪಟ್ಟವೇರಲು ಹೊಂಚು ಹಾಕಿದರೆ, ಅಲ್ಲಿಯ ಟ್ರಸ್ಟಿಗಳು, ಕಾರಭಾರಿಗಳು ಮಠಾಧೀಶನನ್ನು ತಮ್ಮ ಕೈಗೊಂಬೆಯಾಗಿ ಮಾಡಿಕೊಂಡು ಧನದಾಹದೊಂದಿಗೆ ಸ್ವಾರ್ಥ ಸಾಧಿಸುವ ಸಂಚು ನಡೆಸುತ್ತಾರೆ. ಸಮಯಸಾಧಕತನದ ಅವಕಾಶವಾದಿ ಪತ್ರಕರ್ತರು, ಸಾಹಿತಿಗಳು, ಮುಖವಾಡದ ಸಮಾಜ ಸೇವಕರು ಎಲ್ಲರೂ ಗುಳ್ಳೆ ನರಿಗಳಂತೆ ವರ್ತಿಸುತ್ತಾರೆ. ಈ ಕಾದಂಬರಿಯಲ್ಲಿ ಗಮನ ಸೆಳೆಯುವ ಒಂದೇ ಒಂದು ಪಾತ್ರವೆಂದರೆ ಕರಡೆಪ್ಪಶೆಟ್ಟರ ಹೆಂಡತಿ ಮಹಾದೇವಿಯದು. ಪತಿವ್ರತೆಯಾಗಿದ್ದ ಇವಳು ಯಾವುದೋ ದುರ್ಬಲ ಕ್ಷಣದಲ್ಲಿ ಸಿದ್ಧವೀರನ ಸೆಳೆತಕ್ಕೊಳಗಾಗಿ ಜಾರುತ್ತಾಳೆ. ನಂತರ ಪಶ್ಚಾತ್ತಾಪ ಪಟ್ಟ ಈಕೆ ಹಳ್ಳಿಯ ಸುಧಾರಣೆಗೆ ನಿಲ್ಲುತ್ತಾಳೆ.

ಇಂಥ ಕಥೆಯೊಂದನ್ನು ನಿರ್ಭಿಡೆ, ನಿರ್ದಾಕ್ಷಿಣ್ಯದಿಂದ ಯಾವ ಅಳುಕುಗಳಿಲ್ಲದೆ ಕಟ್ಟಿಕೊಟ್ಟದ್ದು ಮತ್ತು ಈ ಎರಡೂ ಕಾದಂಬರಿಗಳು ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲ, ನಾಡಿನುದ್ದಗಲಕ್ಕೂ ವಿವಾದ ಮತ್ತು ಚರ್ಚೆಗೆ ಈಡಾದುವು ಎಂಬುದಂತೂ ಸತ್ಯ. ಹಾಗೆಯೇ ಕಾದಂಬರಿಕಾರನಿಗೆ ಅಪಾರ ಜನಪ್ರಿಯತೆಯನ್ನು ತಂದು ಕೊಟ್ಟವು.

ಕಾದಂಬರಿಯಲ್ಲಿ ಬರುವ ವೈಚಾರಿಕ ದೃಷ್ಟಿಕೋನ ಹಾಗೂ ಕ್ರಾಂತಿಕಾರಿ ಮನೋಭಾವದ ಪತ್ರಕರ್ತರಾದ ಕುಟ್ಟೋಷನಿ ಮತ್ತು ಹರಿಹರರ ಪಾತ್ರಗಳು ಗಮನ ಸೆಳೆಯುತ್ತವೆ. 'ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಅನಾಚಾರಗಳಿಗೆ ಈ ಕೃತಿ ಮೊದಲು ಕೈಗನ್ನಡಿ' ಎಂದು ಹೇಳಿದ ನಿರಂಜನರ ಮಾತು ಶತಸತ್ಯ. ಹಾಗೆ ನೋಡಿದರೆ ಕಟ್ಟೀಮನಿಯವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟ ಕಾದಂಬರಿಗಳಲ್ಲೊಂದು 'ಜರತಾರಿ ಜಗದ್ಗುರು'. ಕಟ್ಟೀಮನಿಯವರ ಧೈರ್ಯ, ಬಂಡಾಯ ಹಾಗೂ ಕ್ರಾಂತಿಕಾರಿ ಮನೋಧರ್ಮಗಳಿಂದಾಗಿ ಇದೊಂದು ನೈಜ, ಪ್ರಗತಿಪರ ಕಾದಂಬರಿಯಾಗಿ ಹೊರಹೊಮ್ಮಿದೆ.

ಹೀಗೆ ಅನೇಕ ಸಾಮಾಜಿಕ ಕಾದಂಬರಿಗಳಾದ ಸಾಕ್ಷಾತ್ಕಾರ, ಆಶ್ರಮವಾಸಿ,

ಜನಿವಾರ ಮತ್ತು ಶಿವದಾರ, ನೀ ನನ್ನ ಮುಟ್ಟಬೇಡ, ಗಿರಿಯ ನವಿಲು, ಬಲೆಯ ಬೀಸಿದರು, ಬೀದಿಯಲ್ಲಿ ಬಿದ್ದವಳು, ಖಾನಾವಳಿಯ ನೀಲಾ, ಪಾತರಗಿತ್ತಿ, ಮಣ್ಣು ಮತ್ತು ಹೆಣ್ಣು, ಹೆಂಡತಿ, ನಾನು ಪೊಲೀಸನಾಗಿದ್ದೆ, ಬಂಗಾರದ ಜಿಂಕೆಯ ಹಿಂದೆ, ಬೆಳಗಿನ ಗಾಳಿ, ಜಲತರಂಗ, ಕತ್ತರಿ ಪ್ರಯೋಗ, ಪ್ರಪಾತ, ತಿರುಗಣಿ, ಸೈತಾನ್, ಜೊತೆಗಾತಿ, ಮಗನತಾಯಿ, ಆಧುನಿಕ ಬಸವಣ್ಣ ಮುಂತಾದವುಗಳು.

ಈ ಎಲ್ಲ ಸಾಮಾಜಿಕ ಕಾದಂಬರಿಗಳು ಸ್ವಾತಂತ್ರ್ಯ ನಂತರದ ಕಾಲದಲ್ಲಿ ರಚಿತವಾದವುಗಳು. ಮೂವತ್ತೈದು ವರ್ಷಗಳ ಅವಧಿಯಲ್ಲಿ ರಚಿತವಾದ ಈ ಕಾದಂಬರಿಗಳಿಗೆ ನಮ್ಮ ನಾಡಿನ ಸಮಕಾಲೀನ ಜೀವನವೇ ಮುಖ್ಯ ಆಕರ. ಈ ಎಲ್ಲ ಕಾದಂಬರಿಗಳಲ್ಲಿ ಕಟ್ಟೀಮನಿಯವರು ತಾವು ಕಂಡ, ಕೇಳಿದ ಹಾಗೂ ವೈಯಕ್ತಿಕವಾಗಿ ಅನುಭವಿಸಿದ ಸಾಮಾಜಿಕ ಪರಿಸರವನ್ನೇ ಕಟ್ಟಿಕೊಟ್ಟಿದ್ದಾರೆ. ಕಾದಂಬರಿಗಳಿಗೆ ವಸ್ತುವನ್ನಾಗಿ ಮಾಡಿಕೊಳ್ಳುವಾಗ ಅವರಿಗೆ ಹೆಚ್ಚು ಹೆಚ್ಚಾಗಿ ಕಂಡದ್ದು ಅದರ ಅವನತಿ, ಅವ್ಯವಸ್ಥೆ ಹಾಗೂ ವಿಕೃತ ಮುಖಗಳು. ಅದರಲ್ಲಿಯೂ ಶೋಷಿತ ವರ್ಗದವರ ಸಾಮಾಜಿಕ ಬದುಕಿನ ಚಿತ್ರಣಕ್ಕೆ ಅವರು ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಅವರ ಕಾದಂಬರಿಗಳ ವಸ್ತು ವಿಧವಿಧವಾಗಿದ್ದರೂ ದೀನ ದಲಿತರನ್ನು, ಅನಾಥರನ್ನು, ಬಡವರನ್ನು, ಶೋಷಿತ ಜನಾಂಗದವರನ್ನು ಕಂಡು ಸಹಾನುಭೂತಿಯನ್ನು ವ್ಯಕ್ತಪಡಿಸಿ ಅನ್ಯಾಯದ ವಿರುದ್ಧ ರೊಚ್ಚಿಗೆದ್ದು ಕ್ರಾಂತಿ ಮಾಡಿದ ಕಾದಂಬರಿಗಳೇ ಹೆಚ್ಚು. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಸಮಾನತೆಯಿಂದಾಗಿ ಶೋಷಿತರ ಪರವಾಗಿ ಅವರ ಕಾದಂಬರಿಗಳಿವೆ. ಕಟ್ಟೀಮನಿಯವರು ಈ ಎಲ್ಲಾ ಸಮಸ್ಯೆಗಳ ಸೂಕ್ತ ಉತ್ತರವನ್ನು ಬಯಸುತ್ತಾರೆ. ಆ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಯತ್ನಿಸುವುದು ಎದ್ದು ಕಾಣುತ್ತದೆ. ಅಂದರೆ ಇಲ್ಲಿ ಕಾಣುವ ಕಟ್ಟೀಮನಿಯವರ ಸಾಮಾಜಿಕ ಪ್ರಜ್ಞೆ ಕೇವಲ ಒಂದು ಸಹಾನುಭೂತಿ ಮಾತ್ರ ಆಗುವುದಿಲ್ಲ. ಬದಲಾಗಿ ಅವರ ಸಾಮಾಜಿಕ ಕಾಳಜಿಯಾಗುತ್ತದೆ. ಬದುಕಿನಲ್ಲಿ ಇಂಥ ಸಾಮಾಜಿಕ ಪ್ರಗತಿಗೆ ಬದ್ಧರಾಗೇ ಹೋರಾಡಿದ ಅವರು ತಮ್ಮ ಬರಹದಲ್ಲೂ ಅದನ್ನು ಬಿಂಬಿಸಿದ್ದಾರೆ. ಈ ಕಾರಣಕ್ಕಾಗಿಯೇ ಅವರನ್ನು ಒಬ್ಬ ಸಮಾಜವಾದಿ, ವಿಚಾರವಾದಿ, ಪ್ರಗತಿಶೀಲ ಚಿಂತಕರೆಂದು ಗುರುತಿಸಿದ್ದು. ಈ ಎಲ್ಲ ಕಾರಣಗಳಿಂದಾಗಿ ಕಟ್ಟೀಮನಿಯವರ ಕಾದಂಬರಿಗಳು ನಮ್ಮ ಇಂದಿನ ಪೀಳಿಗೆಗೆ ದಾರಿ ದೀಪವಾಗಬೇಕೆನ್ನುವುದೇ ಈ ಪ್ರಬಂಧದ ಉದ್ದೇಶವಾಗಿದೆ.

## ಆಕರ ಗ್ರಂಥಗಳು:


1. ಬಸವರಾಜ ಕಟ್ಟೀಮನಿ, (2014), ಸಮಗ್ರ ಸಾಹಿತ್ಯ: ಕಾದಂಬರಿ, ಸಂಪುಟ–2, ಪ್ರಸಾರಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ.
2. ಬಸವರಾಜ ಕಟ್ಟೀಮನಿ, (2014), ಸಮಗ್ರ ಸಾಹಿತ್ಯ: ಕಾದಂಬರಿ, ಸಂಪುಟ–5, ಪ್ರಸಾರಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ.
3. ಬಸವರಾಜ ಕಟ್ಟೀಮನಿ, (2014), ಸಮಗ್ರ ಸಾಹಿತ್ಯ: ಕಾದಂಬರಿ, ಸಂಪುಟ–6, ಪ್ರಸಾರಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.